ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಡಿ. ಮಂಜುನಾಥ (ಉನ್ನತ ಶಿಕ್ಷಣ ಸಚಿವರು) : ಮಾನ್ಯ ಉಪಾಧ್ಯಕ್ಷರೇ, ಲಿಖಿತ ಮೂಲಕ ಉತ್ತರಿಸುವ 2 ನೇ ಪಟ್ಟಿಯಲ್ಲಿರುವ 90 ಪ್ರಶ್ನೆಗಳ ಪೈಕಿ 66 ಪ್ರಶ್ನೆಗಳಿಗೆ ಉತ್ತರವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಕಳ್ಳಂಬೆಳ್ಳ ಪ್ರಸೂತಿ ಗೃಹಕ್ಕೆ ಮಹಿಳಾ ವೈದ್ಯಾಧಿಕಾರಿಗಳು

378 - ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳ್ಳಂಬೆಳ್ಳದಲ್ಲಿ ಪ್ರಸೂತಿಗೃಹ ಮಂಜೂರಾಗಿರುವುದು ಯಾವ ಸಾಲಿನಲ್ಲಿ. ಆದರ ಕೆಲಸ ಪ್ರಾರಂಭವಾಗಿದೆಯೇ?

ಆ) ಈ ಪ್ರಸೂತಿಗೃಹಕ್ಕೆ ಮಹಿಳಾ ವೈದ್ಯಾಧಿಕಾರಿಗಳ ಮತ್ತು ತತ್ಸಮಾನ ಹುದ್ದೆಗಳು ಇದುವರೆಗೂ ಮಂಜಾರಾಗಿರುವುದಿಲ್ಲ ಕಾರಣವೇನು?

ಶ್ರೀ ಹೆಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು). :

ಅ) 1993-94ನೇ ಸಾಲಿನಲ್ಲಿ ಕಳ್ಳಂಬೆಳ್ಳ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಹೊಂದಿಕೊಂಡಂತೆ 10 ಹಾಸಿಗೆಗಳ ಪ್ರಸೂತಿಗೃಹ ಮಂಜೂರಾಗಿರುವುದಿಲ್ಲ.

ಆ) ಮಹಿಳಾ ವೈದ್ಯಾಧಿಕಾರಿಗಳ ಹುದ್ದೆಯನ್ನು ಮಂಜೂರು ಮಾಡಲು ಸರ್ಕಾರದ ಪರಿಶೀಲನೆಯಲ್ಲಿದೆ.

ಅನುದಾನ ರಹಿತ ಬೋಧಕೇತರ ಹುದ್ದೆ ಕಾಯಂ ಗೊಳಿಸುವುದು

379 - ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಡಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಅನುದಾನ ರಹಿತ ಪ್ರೌಢಶಾಲೆ ಮತ್ತು ಪದವಿ ಪೂರ್ವ ಕಾಲೇಜುಗಳ ಭೋದಕೇತರ ವರ್ಗದ ನೌಕರರು ಸಾಮೂಹಿಕ ಆತ್ಮಹತ್ಯೆಗೆ ಪ್ರಯತ್ನಿಸಿ ಬಂಧನಗೊಳಗಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ.

ಆ) ಹಾಗಿದ್ದಲ್ಲಿ, ರಾಜ್ಯದಲ್ಲಿ ಅಂತಹ ಭೋದಕೇತರ ಹುದ್ದೆಗಳು ಎಷ್ಟು ಅವರುಗಳು ಯಾವಾಗಿನಿಂದ ಕೆಲಸ ಮಾಡುತ್ತಿರುವರು.

ಇ) ಅವರ ಹುದ್ದೆಗಳನ್ನು ಖಾಯಂಗೊಳಿಸಲು ಹಾಗೂ ಅನುಧಾನ ಬಿಡುಗಡೆ ಮಾಡಲು ವಿಳಂಬ ಮಾಡದೆ ಸರ್ಕಾರದವರು ಕೂಡಲೇ ಕ್ರಮ ಕೈಗೊಳ್ಳುವರೇ?

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ಬಂದಿದೆ.

ಆ) ಪ್ರೌಢ ಶಾಲೆಗಳು - 708

ಪದವಿಪೂರ್ವ ಕಾಲೇಜುಗಳು - 808

ದಿನಾಂಕ 4.11.86ರಲ್ಲಿ ಆರ್ಥಿಕ ಮಿತವ್ಯಯ ಆದೇಶ ಜಾರಿಗೆ ಬಂದ ನಂತರ ನೇಮಕಗೊಂಡು ಕೆಲಸ ಮಾಡುತ್ತಿದ್ದಾರೆ.

ಇ) ಸರ್ಕಾರದ ಪರಿಶೀಲನೆಯಲ್ಲಿದೆ.

ವಿಕ್ಟೋರಿಯಾ ಆಸ್ಪತ್ರೆಯ ಹೊರರೋಗಿಗಳಿಗೆ ಚಿಕಿತ್ಸೆ.

380 - ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ವೈದ್ಯಕೀಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಎ) ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಹೊರ ರೋಗಿಗಳಿಗೆ ಚಿಕಿತ್ಸೆ ನೀಡಲು ಲಭ್ಯವಿರುವ ಪ್ರೊಫೆಸರ್‌ಗಳು ಎಷ್ಟು?

ಬಿ) ಇವರುಗಳು 1994ನೇ ಸಾಲಿನಿಂದ ಅಪರಾಹ್ನದ ವೇಳೆ ಎಷ್ಟು ಜನರಿಗೆ ಸಲಹೆ ಚಿಕಿತ್ಸೆ ನೀಡಿರುತ್ತಾರೆ? ಪಟ್ಟಿ ನೀಡುವುದು.

ಸಿ) ಇವರುಗಳು ಅಪರಾಹ್ನ ವೇಳೆಯಲ್ಲಿ ಕಾರ್ಯ ನಿರ್ವಹಣೆಯನ್ನು ಎಷ್ಟು ಬಾರಿ ಸರ್ಕಾರದ ಪರಿವೀಕ್ಷಣೆ ನಡೆಸಿದೆ.

ಶ್ರೀ ಎ.ಬಿ. ಪಾಟೀಲ್ (ವೈದ್ಯಕೀಯ ಶಿಕ್ಷಣ ಸಚಿವರು) :

ಎ) ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಹೊರ ರೋಗಿಗಳಿಗೆ ಚಿಕಿತ್ಸೆ ನೀಡಲು ಲಭ್ಯವಿರುವ ಪ್ರೋಫೆಸರುಗಳ ಸಂಖ್ಯೆ 25.

ಬಿ) ಪಟ್ಟಿ ಲಗತ್ತಿಸಿದೆ. ಅನುಬಂಧ-1.

ಸಿ) ಹೊರ ರೋಗಿಗಳ ವಿಭಾಗದ ಮೇಲ್ವಿಚಾರಣೆಗೆಂದು ಒಬ್ಬ ಆಡಳಿತಾಧಿಕಾರಿಯನ್ನು ಜಿಲ್ಲಾ ಸರ್ಜನ್ ಗ್ರೇಡ್ ನೇಮಿಸಲಾಗಿದೆ. ಇವರು ಪ್ರತಿನಿತ್ಯವು ಹೊರ ರೋಗಿ ವಿಭಾಗದ ಪರಿವೀಕ್ಷಣೆಯನ್ನು ಪೂರ್ವಾಹ್ನ ಮತ್ತು ಅಪರಾಹ್ನ ನಡೆಸುವರು.

ಸ್ಥಾನೀಯ ವೈದ್ಯಾಧಿಕಾರಿಯವರು ಪ್ರತಿ ದಿನವು ಹೊರ ರೋಗಿ ವಿಭಾಗಕ್ಕೆ ಭೇಟಿ ನೀಡುತ್ತಾರೆ.

ಅಧೀಕ್ಷಕರು ಆಗಿಂದಾಗ್ಗೆ ಹಾಗೂ ಪ್ರತಿ ಬುಧವಾರ ನೈರ್ಮಲ್ಯ ಪರಿಶೀಲನೆ ಮಾಡುತ್ತಾರೆ. ವೈದ್ಯಕೀಯ ನಿರ್ದೇಶಕರು ಆಸ್ಪತ್ರೆಗೆ ಆಗಾಗ್ಗೆ ಅನಿರೀಕ್ಷಿತ ಭೇಟಿ ನೀಡಿ ಪರಿವೀಕ್ಷಿಸುತ್ತಾರೆ. ಹಾಗೂ ನಿರ್ದೇಶಕರು ರಚಿಸಿರುವ ಸಮಿತಿ ಸದಸ್ಯರುಗಳಾದ ಮುಖ್ಯ ಆಡಳಿತಾಧಿಕಾರಿಯವರು ಹಾಗೂ ಉಪ ನಿರ್ದೇಶಕರು (ವೈ.ಶಿ.) ಆಗಿಂದಾಗ್ಗೆ ಆಸ್ಪತ್ರೆಗೆ ಭೇಟಿ ಪರಿಶೀಲಿಸುತ್ತಿದ್ದಾರೆ.